ಕರ್ನಾಟಕ ಸರ್ಕಾರದ ನಡವಳಿ

ವಿಷಯ : "ಡಿ" ದರ್ಜೆ ನೌಕರರುಗಳಿಗೆ ಹಾಗೂ ವಾಹನ ಚಾಲಕರುಗಳಿಗೆ ಸಮವಸ್ತ್ರ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 1 ಎಸ್‌ಆರ್‌ಪಿ 2000 ದಿನಾಂಕ 7-1-2000
2.ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 19 ಎಸ್‌ಆರ್‌ಪಿ 2005 ದಿನಾಂಕ 22-6-2005
3. ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 31 ಎಸ್‌ಆರ್‌ಪಿ 2007 (XI) ದಿ:14-8-2008
4. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರ ಮನವಿ ಪತ್ರದ ಸಂಖ್ಯೆ ಜಿಇಎ.285/2010-11 ದಿನಾಂಕ 3-5-2010

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 7-1-2000ರ ಸರ್ಕಾರಿ ಆದೇಶದಲ್ಲಿ ವಾಹನ ಚಾಲಕರು : ಹಿರಿಯ ವಾಹನ ಚಾಲಕರುಗಳಿಗೆ ನೀಡಲಾಗುತ್ತಿದ್ದ ಉಚಿತ ಸಮವಸ್ತ್ರದ ಬದಲಾಗಿ ದಿನಾಂಕ 1-1-2000 ರಿಂದ ಜಾರಿಗೆ ಬರುವಂತೆ ಮಾಸಿಕ ರೂ.120/-ರ ದರದಂತೆ ಸಮವಸ್ತ್ರ ಭತ್ಯೆಯನ್ನು ಕೆಲವು ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ 22-6-2005ರ ಸರ್ಕಾರಿ ಆದೇಶದಲ್ಲಿ 'ಡಿ' ದರ್ಜೆ ನೌಕರರುಗಳಿಗೆ ನೀಡಲಾಗುತ್ತಿದ್ದ ಉಚಿತ ಸಮವಸ್ತ್ರದ ಬದಲಾಗಿ ದಿನಾಂಕ 1-7-2005 ರಿಂದ ಜಾರಿಗೆ ಬರುವಂತೆ ಮಾಸಿಕ ರೂ.120/-ರ ದರದಂತೆ ಸಮವಸ್ತ್ರ ಭತ್ಯೆಯನ್ನು ಕೆಲವು ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ 14-8-2008ರ ಸರ್ಕಾರಿ ಆದೇಶದಲ್ಲಿ 5ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಸರ್ಕಾರವು ಗುಂಪು-ಡಿ ವರ್ಗದ ನೌಕರರಿಗೆ ಮತ್ತು ವಾಹನ ಚಾಲಕರಿಗೆ ನೀಡುತ್ತಿದ್ದ ಮಾಸಿಕ ರೂ.120/-ಗಳ ಸಮವಸ್ತ್ರ ಭತ್ಯೆಯನ್ನು ದಿನಾಂಕ 1ನೇ ಆಗಸ್ಟ್ 2008 ರಿಂದ ಜಾರಿಗೆ ಬರುವಂತೆ ರದ್ದುಗೊಳಿಸಲು ಆದೇಶಿಸಲಾಗಿತ್ತು.

ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ 2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ 'ಡಿ' ಗುಂಪಿನ ಸರ್ಕಾರಿ ನೌಕರರಿಗೆ ಹಿಂದೆ ನೀಡುತ್ತಿದ್ದಂತೆ ಸಮವಸ್ತ್ರ ಭತ್ಯೆಯನ್ನು ಮುಂದುವರೆಸಲಾಗುವುದೆಂದು ಘೋಷಿಸಿರುವುದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 12 ಎಸ್‌ಆರ್‌ಪಿ 2010 ದಿನಾಂಕ 18-5-2010

ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 31 ಎಸ್‌ಆರ್‌ಪಿ 2007(XI) ದಿನಾಂಕ 14-8-2008 ರಲ್ಲಿ ದಿನಾಂಕ 1-8-2008 ರಿಂದ ಯಾವ 'ಡಿ' ದರ್ಜೆ ನೌಕರರುಗಳಿಗೆ ಮತ್ತು ವಾಹನ ಚಾಲಕರುಗಳಿಗೆ ಮಾಸಿಕ ಸಮವಸ್ತ್ರ ಭತ್ಯೆಯನ್ನು ನಿಲ್ಲಿಸಲಾಗಿತ್ತೋ, ಅವರುಗಳಿಗೆ ಮಾಸಿಕ ರೂ.250/-ಗಳ ಸಮವಸ್ತ್ರ ಭತ್ಯೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

ಅ) ಸಮವಸ್ತ್ರ ಭತ್ಯೆಯನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಕಟ್ಟುನಿಟ್ಟಾಗಿ ಬಳಸಿಕೊಳ್ಳತಕ್ಕದ್ದು.

ಆ) ಸಮವಸ್ತ್ರ ಭತ್ಯೆಯನ್ನು ಮಂಜೂರು ಮಾಡುವ ದಿನಾಂಕದಿಂದ ಪ್ರತಿಯೊಬ್ಬ ವಾಹನ ಚಾಲಕರು ಹಾಗೂ 'ಡಿ' ದರ್ಜೆ ನೌಕರರು ಕರ್ತವ್ಯದ ಮೇಲೆ ಇದ್ದಾಗ ಕಟ್ಟುನಿಟ್ಟಾಗಿ ಸಮವಸ್ತ್ರವನ್ನು ಧರಿಸತಕ್ಕದ್ದು. ಈ ನಿರ್ದೇಶನವನ್ನು ಪಾಲಿಸದೇ ಇರುವ ವಾಹನ ಚಾಲಕರು ಹಾಗೂ 'ಡಿ' ದರ್ಜೆ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಗಳು ಕ್ರಮ ತೆಗೆದುಕೊಳ್ಳತಕ್ಕದ್ದು.

ಇ) ಸಕ್ಷಮ ಪ್ರಾಧಿಕಾರಗಳು, ಅವರ ಅಧೀನದಲ್ಲಿರುವ 'ಡಿ' ದರ್ಜೆ ನೌಕರರು ಮತ್ತು ವಾಹನ ಚಾಲಕರು ಕರ್ತವ್ಯದ ಮೇಲೆ ಇದ್ದಾಗ ಸಮವಸ್ತ್ರವನ್ನು ಧರಿಸದಿದ್ದಲ್ಲಿ ಸಂಬಳ ಬಟವಾಡೆ ಅಧಿಕಾರಿಗಳಿಗೆ ಈ ಬಗ್ಗೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಹೀಗೆ ನೀಡಿದ್ದಲ್ಲಿ ಈ ಭತ್ಯೆಯನ್ನು ನಿಲ್ಲಿಸತಕ್ಕದ್ದು.

ಈ) ವಾಹನ ಚಾಲಕರು ಹಾಗೂ 'ಡಿ'ದರ್ಜೆ ನೌಕರರು ಧರಿಸಬೇಕಾದ ಸಮವಸ್ತ್ರದ ಮಾದರಿ ಹಾಗೂ ಗುಣಮಟ್ಟವು ಸಾದಿಲ್ವಾರು ವೆಚ್ಚ ಕೈಪಿಡಿ 1958ರಲ್ಲಿ ಮತ್ತು ಸರ್ಕಾರದ ಇತರೆ ಆದೇಶಗಳಲ್ಲಿ ನಿಗದಿಪಡಿಸಿದಂತೆ ಮುಂದುವರೆಯುವುದು.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ:
(ಸುಂದರ ರಾಜ ಗುಪ್ತ)
ಸರ್ಕಾರದ ಉಪಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-2)

------

ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಸಂಖ್ಯೆ ಹನಿಅ/ವಿಭಾಗ-2/ಸಮವಸ್ತ್ರಭತ್ಯೆ/2010-11

ದಿನಾಂಕ : 27-5-2010

:::: ಸುತ್ತೋಲೆ - 6 ::::

ಮೇಲ್ಕಂಡ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 12 ಎಸ್ಆರ್‌ಪಿ 2010 ದಿನಾಂಕ 18-5-2010ನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 18-5-2010 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ. ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು / ನಿಯಂತ್ರಣಾಧಿಕಾರಿಗಳು ಯಾವ ನೌಕರರುಗಳಿಗೆ ದಿನಾಂಕ 1-8-2008 ರಿಂದ ಸಮವಸ್ತ್ರ ಭತ್ಯೆಯನ್ನು ನಿಲ್ಲಿಸಲಾಗಿತ್ತೋ ಅವರುಗಳಿಗೆ ಮಾಸಿಕ ರೂ.250/- ಸಮವಸ್ತ್ರ ಭತ್ಯೆಯನ್ನು ಜೂನ್ 2010ರ ಗಣಕೀಕೃತ ವೇತನ ಬಿಲ್ಲಿನಲ್ಲಿ ಸೇರಿಸಿ ಕಳುಹಿಸುವುದು. ದಿನಾಂಕ 18-5-2010 ರಿಂದ 31-5-2010ರ ಬಾಕಿಯನ್ನು ಸಪ್ಲಿಮೆಂಟರಿ ಬಿಲ್ಲಿನ ಮೂಲಕ ಕ್ಲೈಮ್ ಮಾಡುವಂತೆ ತಿಳಿಸಲಾಗಿದೆ.

ಹಣಕಾಸು ನಿಯಂತ್ರಣಾಧಿಕಾರಿಗಳು

ಪ್ರತಿ :

1. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಕೃಷಿ ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ
3. ಉಪ ಹಣಕಾಸು ನಿಯಂತ್ರಣಾಧಿಕಾರಿಗಳು / ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು, ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಜಿಕೆವಿಕೆ.
4. ಕಡತಕ್ಕೆ.